<u>ದಿಃ **02.12.2024** ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲುಃ **2** ನೇ ಎದುರುದಾರ ಪರ ಶ್ರೀ. ಎನ್ ಎಸ್ ಪಿ ವಕೀಲರಿಂದ</u>

ಅಪಘಾತದ ಪೂರ್ವದಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದೆ. ನಾನು ಟೈಲರಿಂಗ್ ಮಾಡುತ್ತಿದ್ದೆ ಅಂತಾ ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ತಿಂಗಳಿಗೆ ರೂ.25000/-ಟೈಲರಿಂಗ್‌ದಿಂದ ಗಳಿಸುತ್ತಿದ್ದೆ ಎಂದು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ 25000 ರೂಪಾಯಿ ಆದಾಯ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನಾನು ನ್ಯಾಯಾಲಯಕ್ಕೆ ನಡೆದುಕೊಂಡು ಬಂದು ಮೇಲೆ ಹತ್ತಿ ಬಂದಿದ್ದೇನೆ ಎಂದರೆ ಸರಿ. ನನಗೆ 6 ತಿಂಗಳವರೆಗೆ ವೈದ್ಯರು ವಿಶ್ರಾಂತಿ ಪಡೆಯಲು ಹೇಳಿದ್ದರು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಿಕಿತ್ಸೆಗೆ 4 ಲಕ್ಷ ರೂಪಾಯಿ ಖರ್ಚು ಮಾಡಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಶಾಶ್ವತ ಅಂಗನ್ಯೂನ್ಯತೆ ಹೊಂದಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಂಪೂರ್ಣ ಗುಣ ಹೊಂದಿದ ಮೇಲೆ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದೇನೆ ಎಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆಗೆ 1 ಲಕ್ಷ ರೂಪಾಯಿ ಬೇಕಾಗುತ್ತದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಅಂಗನ್ಯೂನ್ಯತೆ ಹೊಂದದೇ ದಿನನಿತ್ಯದ ಕೆಲಸ ಮಾಡಿಕೊಂಡು ಇದ್ದೇನೆ ಎಂದರೆ ಸರಿಯಲ್ಲ. ಎರಡು ವಾಹನಗಳು ಎದುರುಬದುರು ಬರುತ್ತಿದ್ದವು ಎಂದರೆ ಸರಿ. ಸದರಿ ವಾಹನದಲ್ಲಿ 8 ಜನ ಇದ್ದೆವು ಎಂದರೆ ಸರಿ. ಅದರಲ್ಲಿ ನಾನು, ನನ್ನ ಗಂಡ ಮತ್ತು ನನ್ನ 2 ಮಕ್ಕಳು ಮತ್ತು ಭಾವನ 4 ಮಕ್ಕಳು ಇದ್ದರು ಎಂದು ನುಡಿಯುತ್ತಾರೆ. 8 ಜನ ಇದ್ದುದ್ದರಿಂದ ಮಕ್ಕಳೊಂದಿಗೆ ಹುಡುಗಾಟ ಮಾಡುತ್ತಾ ವಾಹನ ನಿಯಂತ್ರಣ ತಪ್ಪಿ ನನ್ನ ಗಂಡ ಅಪಘಾತಪಡಿಸಿದ್ದಾರೆ ಎಂದರೆ ಸರಿಯಲ್ಲ ಮಹೇಂದ್ರ ಗಾಡಿ ಚಾಲಕನ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನಮ್ಮ ವಾಹನಕ್ಕೆ ಇನ್ಸುರೆನ್ಸ ಇತ್ತು. ಅದನ್ನು ಹಾಜರುಪಡಿಸಿದ್ದೇನೆ. ನಾನು ಖೊಟ್ಟಿ ಆಸ್ಪತ್ರೆ ಬಿಲ್ಲುಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣವನ್ನು 6 ತಿಂಗಳೊಳಗೆ ದಾಖಲಿಸಿಲ್ಲ ಎಂದರೆ ಸರಿ. ಮಹೇಂದ್ರ ವಾಹನದ ಚಾಲಕನ ಡಿಎಲ್ ಇರಲಿಲ್ಲ ಎಂದರೆ ಸರಿಯಲ್ಲ. ಈ ಅಪಘಾತವು ನನ್ನ ಗಂಡನ ತಪ್ಪಿನಿಂದ ಆಗಿದ್ದರಿಂದ ಇನ್ಸೂರೆನಸ ಕಂಪನಿಯವರು ಯಾವುದೇ ಪರಿಹಾರ ಕೊಡಲು

ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾವು ಒಂದು ಮಗುವಿನ ಪರಿಹಾರ ಕೇಳಿ ಶಿರಸಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಪೆಟಿಶನ್ ದಾಖಲು ಮಾಡಿದ್ದೇನೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.
Sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್